ಗ್ರಾಅಪ: 134: ಆರ್‌ಡಿಪಿ-2016

1 ಮಾನ್ಯ ಬಂಗಾರಪೇಟೆ ಮತಕ್ಷೇತ್ರದ ಶಾಸಕರಾದ ಶ್ರೀ ಎಸ್.ಎನ್. ನಾರಾಯಣಸ್ವಾಮಿ ಕೆ.ಎಂ. ರವರು ಮಾನ್ಯ ಗ್ರಾ.ಅ. ಮತ್ತು ಮತ್ತು ಪಂ.ರಾಜ್ ಸಚಿವರಿಗೆ ಸಲ್ಲಿಸಿರುವ ಪತ್ರವನ್ನು ದಯವಿಟ್ಟು ಅವಗಾಹಿಸಲು ಕೋರಿದೆ.

2 ಈ ಪತ್ರದಲ್ಲಿ ಬಂಗಾರಪೇಟೆ ಮೀಸಲು ಕ್ಷೇತ್ರದ ಗ್ರಾಮೀಣ ರಸ್ತೆಗಳ ದುರಸ್ತಿಗಾಗಿ ವಿಶೇಷ ಅನುದಾನ ಬಿಡುಗಡೆ ಮಾಡುವಂತೆ 2 ರಸ್ತೆ ಕಾಮಗಾರಿಗಳ ಒಟ್ಟು ರೂ.50.00 ಲಕ್ಷ ಮೊತ್ತದ ಕಾಮಗಾರಿಗಳನ್ನು ನಮೂದಿಸಿ ಮಾನ್ಯ ಗ್ರಾಅಪಂರಾ ಸಚಿವರನ್ನು ಕೋರಿರುತ್ತಾರೆ. ಸದರಿ ಪತ್ರದ ಮೇಲೆ ಮಾನ್ಯ ಗ್ರಾಅಪಂರಾ ಸಚಿವರು 30 ಲಕ್ಷ ರೂ.ಬಿಡುಗಡೆ ಮಾಡುವುದು ಸೂಚನಾದೇಶ ನೀಡಿರುತ್ತಾರೆ.

3 ಪ್ರಸ್ತುತ 2016-17ನೇ ಸಾಲಿನಲ್ಲಿ ಯಾವುದೇ ಅನುದಾನ ಲಭ್ಯವಿರುವುದಿಲ್ಲ. ರೂ.30.00 ಲಕ್ಷಗಳ ಹೆಚ್ಚುವರಿ ಅನುದಾನ ಬಿಡುಗಡೆಗಾಗಿ ಆರ್ಥಿಕ ಇಲಾಖೆಯನ್ನು ಕೋರಬಹುದಾಗಿದ್ದು, ಇದರ ಪೂರ್ವದಲ್ಲಿ ಮಾನ್ಯ ಗ್ರಾ.ಅ. ಮತ್ತು ಪಂ.ರಾಜ್ ಸಚಿವರ ಅನುಮೋದನೆ ಕೋರಬಹುದಾಗಿದೆ. ಈ ಕುರಿತು ಮುಂದಿನ ಆದೇಶ ಕೋರಿ ಕಡತ ಮಂಡಿಸಿದೆ.

23/9/16
ಯೋಜನಾ ನಿರ್ದೇಶಕರು

4 ನಿರ್ದೇಶಕರು

5 ದಯಮಾಡಿ ಮೇಲಿನ ಪ್ಯಾರಾಗಳನ್ನು ಅವಗಾಹಿಸುವುದು. ಅದರಂತೆ ಶ್ರೀ ಎಸ್.ಎನ್. ನಾರಾಯಣಸ್ವಾಮಿ ಕೆ. ಎಂ. ವಿಧಾನಸಭಾ ಸದಸ್ಯರು ಬಂಗಾರಪೇಟೆ ಕ್ಷೇತ್ರ ರವರು ಬಂಗಾರಪೇಟೆ ಮೀಸಲು ಕ್ಷೇತ್ರದ ಗ್ರಾಮೀಣ ರಸ್ತೆಗಳನ್ನು ದುರಸ್ತಿಪಡಿಸಲು ರೂ.50.00ಲಕ್ಷಗಳ ಮಿತಿಯಲ್ಲಿ 2 ಕಾಮಗಾರಿಯನ್ನು ಕೈಗೊಳ್ಳಲು ಮಾನ್ಯ ಮಾನ್ಯ ಗ್ರಾಅಪ ಸಚಿವರನ್ನು ಕೋರಿರುತ್ತಾರೆ.

6 ಈ ಪ್ರಸ್ತಾವನೆಯನ್ನು ಪರಿಶೀಲಿಸಿ **"ರೂ.30.00ಲಕ್ಷಗಳನ್ನು ಬಿಡುಗಡೆ ಮಾಡುವುದು"ಎಂದು** ಬಾವುಟ-(1) ರಲ್ಲಿರುವಂತೆ ಮಾನ್ಯ ಸಚಿವರು ಸೂಚನಾಧೇಶನವನ್ನು ನೀಡಿರುತ್ತಾರೆ. ಆದರೆ, ಇಲಾಖೆಯಲ್ಲಿ ಯಾವುದೇ ಅನುದಾನ ಇಲ್ಲದಿರುವುದರಿಂದ ಈ ಪ್ರಸ್ತಾವನೆಯನ್ನು ಪರಿಗಣಿಸಲು ಸಾಧ್ಯವಾಗುತ್ತಿಲ್ಲ.

7 ಆದ್ದರಿಂದ, ಮಾನ್ಯ ಗ್ರಾಅಪ ಸಚಿವರ ಸೂಚನಾಧೇಶದಂತೆ ಆದ್ಯತೆಯ ಮೇಲೆ ಈ ಕಾಮಗಾರಿಯನ್ನು ಕೈಗೊಳ್ಳಬೇಕಾದ್ದಲ್ಲಿ ರೂ.30.00ಲಕ್ಷಗಳ ಹೆಚ್ಚುವರಿ ಅನುದಾನವನ್ನು ನೀಡುವ ಕುರಿತಂತೆ ಆರ್ಥಿಕ ಇಲಾಖೆಯ ಅಭಿಪ್ರಾಯವನ್ನು ಕೋರಬಹುದಾಗಿದೆ.

8

ಪೂರ್ವದಲ್ಲಿ ಮಾನ್ಯ ಸಚಿವರ ಅನುಮೋದನೆಯನ್ನು ಪಡೆಯಬಹುದಾಗಿದೆ.

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು (ಸುಗ್ರಾಯೋ, ರಸ್ತೆ & ಸೇತುವೆ) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

Pr.Secy./RDPR
No. 3208 Dt: 14/10/16

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು

14/10/16

ಡಾ.ಎಸ್. ನಾಗಾಂಬಿಕಾ ದೇವಿ, ಭಾ.ಆ.ಸೇ.
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ

ಅನುಮೋದಿಸಿದೆ.

3.11.2016

ಎಚ್.ಕೆ. ಪಾಟೀಲ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು